ದಿನಾಂಕಃ 01.03.2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು
ಮುಖ್ಯ ವಿಚಾರಣೆ ಪ್ರತಿವಾದಿಯ ಪರ ವಕೀಲರಾದ ಶ್ರೀ. ಟಿ ಎಸ್ ಆರ್ ರವರಿಂದಃ

ನಾನು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಚಾರಗಳನ್ನು ನಾನು ನನ್ನ ವಕೀಲರಿಗೆ ತಿಳಿಸಿ ನನ್ನ ವಕೀಲರ ಮುಖಾಂತರ ಬರೆಸಿರುತ್ತೇನೆ ಹಾಗೂ ನನ್ನ ಸಹಿಯನ್ನು ಪ್ರಮಾಣ ಪತ್ರಕ್ಕೆ ಹಾಕಿರುತ್ತೇನೆ.

ಜುಬಾನೆ ಹಿಸ್ಸೆಯ ಪಾಲು ಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 1 ಎಂದು , ಸಾಕ್ಷಿಯು ಅದರಲ್ಲಿ ಇರುವ ತಂದೆಯ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಡಿ 1(ಎ) ಗುರುತಿಸಲಾಯಿತು. ಈಗ ನನ್ನ ತಂದೆ ತೀರಿಕೊಂಡಿರುತ್ತಾರೆ. ಸಾಕ್ಷಿಯು ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಡಿ 1(ಬಿ) ಎಂದು, ಸಾಕ್ಷಿಯು ಗಣಪಯ್ಯ ನವರು ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ ಎಂದು ನುಡಿದಿದ್ದು ಸದರಿ ಸಹಿಯನ್ನು ನಿಡಿ 1(ಸಿ) ಎಂದು ಗುರುತಿಸಲಾಯಿತು. ಗಣಪಯ್ಯನವರು ಈಗ ತೀರಿಕೊಂಡಿರುತ್ತಾರೆ. ನಮ್ಮ ಊರಿನ ಚಂದ್ರಶೇಖರ್ ನವರು ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಡಿ 1(ಡಿ) ಎಂದು ಗುರುತಿಸಲಾಯಿತು. ಈಗ ಚಂದ್ರಶೇಖರ್ ರವರು ತೀರಿಕೊಂಡಿರುತ್ತಾರೆ. ನಾರಾಯಣ ಸ್ವಾಮಿಯವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಡಿ 1(ಇ) ಎಂದು ಗುರುತಿಸಲಾಯಿತು. ನಾರಾಯಣಸ್ವಾಮಿಯವರು ಸಾಗರದಲ್ಲಿ ವಕೀಲರಾಗಿದ್ದು ನನ್ನ ಭಾವ ಅವರು ಈಗ ತೀರಿಕೊಂಡಿರುತ್ತಾರೆ. ತಿಮ್ಮಪ್ಪ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಡಿ 1(ಎಫ್) ಎಂದು ಗುರುತಿಸಲಾಯಿತು. ತಿಮ್ಮಪ್ಪ ರವರು ಈಗ ತೀರಿಕೊಂಡಿರುತ್ತಾರೆ. ಸಾಕ್ಷಿದಾರರನ್ನು ಸಮುಖದಲ್ಲೇ ಬುಬಾನೆ ಹಿಸ್ಸೆ ಕೂಡ ಆಗಿರುತತದೆ.ನಾನು ಮತ್ತು ನನ್ನ ತಂದೆ ನಿಡಿ 1 ಕ್ಕೆ ಸಹಿ ಹಾಕುವಾಗ ಎಲ್ಲ ಸಾಕ್ಷಿದಾರರು ಹಾಜರಿದ್ದರು ಹಾಗೂ ಎಲ್ಲ ಸಾಕ್ಷಿ ದಾರರು ಸಹಿ ಹಾಕುವಾಗ ನಾನು ಮತ್ತು ನನ್ನ ತಂದೆ ಹಾಜರು ಇದ್ದೆವು. ಸುಬ್ಬರಾವ್ ಬಿಕ್ಕಲಂದಾರರು ಅವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ 1(ಜಿ) ಎಂದು ಗುರುತಿಸಲಾಯಿತು. ಸುಬ್ಬರಾವ್ ಹಾಸಿಗೆ ಹಿಡಿದಿರುತ್ತಾರೆ. ಓಡಾಡುವ ಸ್ಥಿತಿಯಲ್ಲಿ ಇರುವುದಿಲ್ಲ. 3 ಆರ್.ಟಿ.ಸಿ. ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 2 ರಿಂದ 4 ಎಂದು ,

2 ಮುಟೇಷನ್ ರಿಜಿಸ್ಟರ್ ನ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 5 ಮತ್ತು 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ